***MVC No. 350/2025***
***PW:01***

**ಸಾಕ್ಷಿಯನ್ನು ದಿಃ *11/02/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಆರಹೆಚಕೆ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಅಪಘಾತವು ಅಣ್ಣಿಗೇರಿ ಕ್ರಾಸ ಹತ್ತಿರ ಆಗಿರುತ್ತದೆ. ನನ್ನ ಪತಿ ನಡೆದುಕೊಂಡು ಹೋಗುವಾಗ ದ್ವಿಚಕ್ರ ವಾಹನದ ಚಾಲಕ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತಾರೆ. ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಸ್ಥಳದಲ್ಲಿರುವ ವ್ಯಕ್ತಿಗಳು ನನಗೆ ಅಪಘಾತದ ಸುದ್ದಿ ತಿಳಿಸಿರುತ್ತಾರೆ. ನಾನು ಕೂಡಲೇ ಅಪಘಾತದ ಸ್ಥಳಕ್ಕೆ ಹೋಗಿದ್ದೆ. ಅಪಘಾತದ ಕುರಿತು ನಾನು ಅಲ್ಲಿ ಮಾಹಿತಿ ಪಡೆದುಕೊಂಡು ದೂರು ನೀಡಿರುತ್ತೇನೆ. ಅಪಘಾತವಾದಾಗ ಸಮಯ ಸಂಜೆ 7 ಗಂಟೆ ಆಗಿತ್ತು.

ಅಪಘಾತವಾದ ನಂತರ ನನ್ನ ಪತಿಯನ್ನು ಗದಗ ಆಸ್ಪತ್ರೆಗೆ ಕರೆದುಕೂಂಡು ಹೋದೆವು. ಆಸ್ಪತ್ರೆಗೆ ಕರೆದಕೊಂಡು ಹೋಗುವಾಗ ಪ್ರಾಣ ಹೋಗಿರುತ್ತದೆ. ನನ್ನ ಪತಿಯ ಶವ ಪರೀಕ್ಷೆಯನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ.

ನನ್ನ ಪತಿ ಕೂಲಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ 18 ಸಾವಿರ ರೂಪಾಯಿ ಗಳಿಸುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ. ನನಗೆ ಮೂರು ಜನ ಮಕ್ಕಳು ಇದ್ದು, ಇಬ್ಬರೂ ಹೆಣ್ಣುಮಕ್ಕಳು ತಮ್ಮ ತಮ್ಮ ಗಂಡನ ಮನೆಯಲ್ಲಿ ವಾಸವಿದ್ದು, ಒಬ್ಬ ಗಂಡು ಮಗ ತೀರಿಹೋಗಿದ್ದಾನೆ. ವಾಹನಗಳನ್ನು ನೋಡದೇ ರಸ್ತೆಯನ್ನು ದಾಟುವಾಗ ನನ್ನ ಪತಿಯ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ನನ್ನ ಪತಿಯ ತಪ್ಪಿನಿಂದ ಆಗಿರುವ ಕಾರಣ ಮತ್ತು ಮೋಟಾರುಸೈಕಲನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಾರದ ಕಾರಣ 2 ನೇ ಎದುರುದಾರ ವಿಮೆ ಕಂಪನಿಯವರು ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

***ಪಾಟೀ ಸವಾಲು ಃ 1 ನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಯಾವುದೇ ಸಮಂಜಸವಾದ ಕಾರಣವಿರಲಾರದ ಕಾರಣ ಅವರ ಮನವಿಯ ತಳ್ಳಿ ಹಾಕಿ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.